# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 31–01–2019ರ ಗುರುವಾರದಂದು ಪೂರ್ವಾಹ್ನ 11.00 ಗಂಟೆಗೆ ಜರುಗಿದ ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳು.**

**ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಪ್ರೊ. ಆಯಿಷಾ ಎಂ.ಷರೀಫ್ | ಸದಸ್ಯರು |
| 3. | ಪ್ರೊ.ಎ.ಬಾಲಸುಬ್ರಮಣಿಯನ್ | ಸದಸ್ಯರು |
| 4. | ಶ್ರೀಮತಿ ಸಹನಾ ಶಿವಪ್ಪ | ಸದಸ್ಯರು |
| 5. | ಡಾ. ರಾಜಗೋಪಾಲ್ | ಸದಸ್ಯರು |
| 6. | ಡಾ. ಎಂ.ಪ್ರೀತಿ | ಸದಸ್ಯರು |
| 7. | ಶ್ರೀ.ಜಿ.ಆಶ್ವಥನಾರಾಯಣ | ಸದಸ್ಯರು |
| 8. | ಶ್ರೀ.ಕೆ.ಟಿ.ಅಪ್ಪಾಜಪ್ಪ | ಸದಸ್ಯರು |
| 9. | ಪ್ರೊ. ಜೆ. ಸೋಮಶೇಖರ್<br>ಕುಲಸಚಿವ(ಪರೀಕ್ಷಾಂಗ) | ಸದಸ್ಯರು |
| 10. | ಪ್ರೊ. ಆರ್.ರಾಜಣ್ಣ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ, ಇತ್ತೀಚೆಗೆ ದೈವಾಧೀನರಾದ ಸಿದ್ದಗಂಗಾಮತದ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಅವರ ನಿಧನಕ್ಕೆ ಸಂತಾಪ ಸೂಚಿಸಿ ಅವರ ಗೌರವಾರ್ಥ ಅವರ ಆತ್ಮಕ್ಕೆ ಶಾಂತಿ ಕೋರಿ ಸಭೆಯಲ್ಲಿ ಎರಡು ನಿಮಿಷಗಳ ಕಾಲ ಮೌನವನ್ನಾಚರಿಸಲಾಯಿತು.

ತದ ನಂತರ ಮಾನ್ಯ ಕುಲಸಚಿವರು, ಸಿಂಡಿಕೇಟ್ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ಮಾನ್ಯ ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್‌ರವರನ್ನು ಹಾಗೂ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಸಿಂಡಿಕೇಟ್‌ನ ಮೊದಲನೇ ಸಾಮಾನ್ಯ ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಹಾಗೆಯೇ ವಿ.ವಿ.ಕಾಯ್ದೆ, 2000 ಪ್ರಕರಣ 28(ಹೆಚ್)ರ ಅನ್ವಯ ಸರ್ಕಾರದ ಅನುಮೋದನೆಯೊಂದಿಗೆ ಕುಲಪತಿಯವರಿಂದ ಸಿಂಡಿಕೇಟ್ ಸದಸ್ಯತ್ವಕ್ಕೆ ನಾಮನಿರ್ದೇಶನಗೊಂಡಿರುವ ಹಾಗೂ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಹಿರಿಯ ಪ್ರಾಧ್ಯಾಪಕರಾಗಿರುವ ಪ್ರೊ. ಎ.ಬಾಲಸುಬ್ರಮಣಿಯನ್, ಭೂವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರನ್ನು ಕುಲಸಚಿವರು ಸಿಂಡಿಕೇಟ್‌ಗೆ ಪರಿಚಯಿಸಿ ಸ್ವಾಗತಿಸಿದರು.

ಮಾನ್ಯ ಕುಲಸಚಿವರು, ಕಾರ್ಯಸೂಚಿಯಂತೆ ಸಭೆಯಲ್ಲಿ ವಿಷಯ ಮಂಡನೆ ಮಾಡಲು ಸಭೆಯ ಅನುಮತಿ ಕೋರಿದರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I | ದಿನಾಂಕ 28-12-2018 ರಂದು ನಡೆದ ಸಿಂಡಿಕೇಟ್ ಎಂಟನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ 28-12-2018 ರಂದು ನಡೆದ ಸಿಂಡಿಕೇಟ್ ಎಂಟನೇ ಸಾಮಾನ್ಯ ಸಭೆಯ ನಡಾವಳಿಗಳನ್ನು **ದೃಢೀಕರಿಸಲಾಯಿತು.** |
| II | ದಿನಾಂಕ 28-12-2018 ರಂದು ನಡೆದ ಸಿಂಡಿಕೇಟ್ ಎಂಟನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| **ತೀರ್ಮಾನ** | **ಗಮನಿಸಲಾಯಿತು.** |
| **2019/1.1** | ಶ್ರೀ ಎ.ಎನ್.ಸಂತೋಷ್‌ಕನ್ನಡ, ಸಂಶೋಧನಾ ವಿದ್ಯಾರ್ಥಿ ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| **ತೀರ್ಮಾನ** | ಡಾ. ಎಂ.ಕೆ.ಮಹೇಶ್, ಸಹ ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ, ಯುವರಾಜ ಕಾಲೇಜು ಇವರ ಮಾರ್ಗದರ್ಶನದಲ್ಲಿ ಸಂಶೋಧನಾ ಅಭ್ಯರ್ಥಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎ.ಎನ್.ಸಂತೋಷ್‌ಕನ್ನಡ ಇವರು ತಮ್ಮ ಸಂಶೋಧನೆಗೆ ಸಂಬಂಧಿಸಿದ one experimental data ಲಭ್ಯವಾಗದೇ ಇರುವುದರಿಂದ ಸಂಶೋಧನೆಯನ್ನು ಪೂರ್ಣಗೊಳಿಸಲಾಗಿರುವುದಿಲ್ಲ ಹಾಗೂ ಮಹಾಪ್ರಬಂಧವನ್ನು ಅಂತಿಮಗೊಳಿಸಲು ಸಾಧ್ಯವಾಗುತ್ತಿಲ್ಲ ಎಂಬ ಮನವಿಯನ್ನು ಸಲ್ಲಿಸುತ್ತಾ ಹೆಚ್ಚುವರಿಯಾಗಿ ಆರು ತಿಂಗಳುಗಳ ಕಾಲಾವಕಾಶ ಕೋರಿರುವುದನ್ನು ಪರಿಗಣಿಸಿದ ಸಭೆಯು ರೂ.25,000/-ಗಳ ದಂಡಶುಲ್ಕದೊಂದಿಗೆ ಸಂಶೋಧನೆಯನ್ನು ಅಂತಿಮಗೊಳಿಸಿ ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಆರು ತಿಂಗಳ ಕಾಲಾವಕಾಶವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/1.2** | ಪರೀಕ್ಷಾವಿಭಾಗದ ಪರೀಕ್ಷಾ ಕಾರ್ಯಗಳಿಗೆ ಒಂದು ಗೂಡ್ಸ್ ವಾಹನವನ್ನು ಖರೀದಿಸುವ ಬಗ್ಗೆ. |
| **ತೀರ್ಮಾನ** | ಪರೀಕ್ಷಾ ವಿಭಾಗದ ಪರೀಕ್ಷಾ ಕಾರ್ಯಗಳಿಗೆ ಅವಶ್ಯವಿರುವ ಒಂದು ಗೂಡ್ಸ್ ವಾಹನವನ್ನು ನಿಯಮಾನುಸಾರ ಖರೀದಿಸಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2019/1.3** | ಭೌತಶಾಸ್ತ್ರ, ಪರಿಸರ ವಿಜ್ಞಾನ, ಸೂಕ್ಷ್ಮಜೀವಶಾಸ್ತ್ರ, ಸಮಾಜಶಾಸ್ತ್ರ ಮತ್ತು ಇಂಗ್ಲೀಷ್ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರುಗಳನ್ನು ನೇಮಿಸುವ ಸಂಬಂಧ ಸಿಂಡಿಕೇಟಿನ ಅನುಮೋದನೆಗಾಗಿ ಕರಡು ವಿಷಯವನ್ನು ಮಂಡಿಸಿರುವ ಬಗ್ಗೆ. |
| **ತೀರ್ಮಾನ** | ಭೌತಶಾಸ್ತ್ರ, ಪರಿಸರ ವಿಜ್ಞಾನ, ಸೂಕ್ಷ್ಮಜೀವಶಾಸ್ತ್ರ, ಸಮಾಜಶಾಸ್ತ್ರ ಮತ್ತು ಇಂಗ್ಲೀಷ್ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರುಗಳನ್ನು ನಿಯಮಾನುಸಾರ ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/1.4** | ಶೈಕ್ಷಣಿಕ ವರ್ಷ 2015–16ರಲ್ಲಿ ತಳಿಶಾಸ್ತ್ರ ವಿಭಾಗಕ್ಕೆ ಪ್ರವೇಶಾತಿ ಪಡೆದ 07 ವಿದ್ಯಾರ್ಥಿಗಳ ಬಾಕಿ ಪ್ರವೇಶಾತಿ ಶುಲ್ಕ ಮನ್ನಾ ಮಾಡಿರುವ ಬಗ್ಗೆ. |
| **ತೀರ್ಮಾನ** | ಶೈಕ್ಷಣಿಕ ವರ್ಷ 2015–16ರಲ್ಲಿ ತಳಿಶಾಸ್ತ್ರ (Genetics & Genomics) ವಿಭಾಗಕ್ಕೆ ಪ್ರವೇಶಾತಿ ಪಡೆದ 07 ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಬರಬೇಕಾಗಿದ್ದ ಶುಲ್ಕವು ಮರುಭರಿಕೆಯಾಗದ ಕಾರಣ ಇದೊಂದು ಬಾರಿಗೆ (One Time Measure) ಸಿಂಡಿಕೇಟ್‌ನ ನಿರ್ಣಯವನ್ನು ಕಾಯ್ದಿರಿಸಿ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾಗಿದ್ದ ಶುಲ್ಕವನ್ನು ಮನ್ನಾಮಾಡಿರುವುದನ್ನು ಸಿಂಡಿಕೇಟ್ ಸ್ಥಿರೀಕರಿಸಿತು. ಹಾಗೂ ಈ ಪ್ರಕರಣವು ಮುಂದಿನ ದಿನಗಳಲ್ಲಿ ಶುಲ್ಕ ವಿನಾಯಿತಿಗೆ ಪೂರ್ವನಿದರ್ಶನವಾಗಿ (Precedent) ತೆಗೆದುಕೊಳ್ಳದಿರಲು ಸಹ ತೀರ್ಮಾನಿಸಿತು. |
| **2019/1.5** | ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳಲ್ಲಿ ಉಪನ್ಯಾಸ ನೀಡಲು ವಿದೇಶಿ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳಲ್ಲಿ ಉಪನ್ಯಾಸ ನೀಡಲು ವಿದೇಶಿ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಸಂಬಂಧ ಒಂದು ಸಮಿತಿಯನ್ನು ರಚಿಸಿದ್ದು ಇದರ ತೀರ್ಮಾನದನುಸಾರ ಹಾಗೂ ವಿಶ್ವವಿದ್ಯಾನಿಲಯದೊಂದಿಗೆ ಒಡಂಬಡಿಕೆಗೆ ಒಳಪಟ್ಟಿರುವ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಾಧ್ಯಾಪಕರನ್ನು "ವಿದೇಶಿ ಅಧ್ಯಾಪಕರ ಆಹ್ವಾನ ಮಾರ್ಗದರ್ಶಿ ಸೂತ್ರಗಳ"ಲ್ಲಿ ಅಳವಡಿಸಿಕೊಂಡು ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳಲ್ಲಿ ಉಪನ್ಯಾಸ ನೀಡುವ ಸಲುವಾಗಿ ಅಂತಹವರಲ್ಲಿ ಶ್ರೇಷ್ಠ ಅಧ್ಯಾಪಕರನ್ನು ಆಹ್ವಾನಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/1.6** | 99ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪಡೆಯಲು ಗಣ್ಯರ ಹೆಸರುಗಳನ್ನು ಶಿಫಾರಸ್ಸು ಮಾಡುವ ಬಗ್ಗೆ |
| **ತೀರ್ಮಾನ** | 99ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿ.ವಿ.ಕಾಯ್ದೆಯನುಸಾರ ಗೌರವ ಡಾಕ್ಟರೇಟ್ ಪದವಿ ನೀಡುವ ಸಂಬಂಧ ಗಣ್ಯರ ಹೆಸರುಗಳ ಪಟ್ಟಿಯನ್ನು ಸಿದ್ಧಪಡಿಸಿ ಅಂತಹ ಪಟ್ಟಿಯನ್ನು ನಿವೃತ್ತ ಕುಲಪತಿಗಳ/ನಿವೃತ್ತ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ/ನಿವೃತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಡುವ ಪರಿಶೀಲನಾ ಸಮಿತಿಯ ಮುಂದೆ ಮಂಡಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ನಿರ್ಧರಿಸಿತು. |
| **2019/1.7** | ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಬಾಲಕಿಯರ ವಿದ್ಯಾರ್ಥಿನಿಲಯವನ್ನು ನಿರ್ಮಾಣ ಮಾಡುವ ಸಂಬಂಧ ಉಚಿತವಾಗಿ ನಿವೇಶನ ನೀಡುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಆವರಣದಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗೂ ವಿದೇಶಿ ವಿದ್ಯಾರ್ಥಿಗಳಿಗಾಗಿ ವಸತಿ ನಿಲಯ ನಿರ್ಮಾಣಮಾಡುವ ಯೋಜನೆಯನ್ನು ಈಗಾಗಲೇ |

| | |
|---|---|
| | ಆರಂಭಿಸಲಾಗಿರುವುದರಿಂದ ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಬಾಲಕಿಯರ ವಿದ್ಯಾರ್ಥಿನಿಲಯವನ್ನು ನಿರ್ಮಿಸಲು ಉಚಿತವಾಗಿ ನಿವೇಶನವನ್ನು ನೀಡುವಂತೆ ಕೋರಿರುವ ಮನವಿಯನ್ನು ಪರಿಗಣಿಸದಿರಲು ಸಿಂಡಿಕೇಟ್ ಒಮ್ಮತದಿಂದ ತೀರ್ಮಾನಿಸಿತು. |
| **2019/1.8** | ಪ್ರೊ. ರಫ಼ಥುನ್ನಿಸಾ ಬೇಗಂ, ನಿವೃತ್ತ ಪ್ರಾಧ್ಯಾಪಕರು, ಉರ್ದು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಕೋರಿರುವ ಬಗ್ಗೆ. |
| **ತೀರ್ಮಾನ** | ಪ್ರೊ. ರಫ಼ಥುನ್ನಿಸಾ ಬೇಗಂ, ನಿವೃತ್ತ ಪ್ರಾಧ್ಯಾಪಕರು, ಉರ್ದು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರನ್ನು ನಿಯಮಾನುಸಾರ ಗೌರವ ಸಂಭಾವನೆಯೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಅನುಮೋದಿಸಿತು. |
| **2019/1.9** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ. ಯು.ಆರ್. ಅನಂತಮೂರ್ತಿ ಅವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪನೆ ಸಂಬಂಧ ಸಿದ್ಧಪಡಿಸಿರುವ ಕರಡು ಅಧಿನಿಯಮ ಅನುಮೋದಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ. ಯು.ಆರ್. ಅನಂತಮೂರ್ತಿ ಅವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪನೆ ಸಂಬಂಧ ಸಿದ್ಧಪಡಿಸಿರುವ ಕರಡು ಅಧಿನಿಯಮವನ್ನು ಅನುಮೋದಿಸಿದ ಸಿಂಡಿಕೇಟ್ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಕಾಯ್ದೆ 2000 ಪ್ರಕರಣ 41(6)ರನ್ವಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ತೀರ್ಮಾನಿಸಿತು. |
| **2019/1.10** | ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲ್ಪಡುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ನೀಡುತ್ತಿರುವ ವಿವಿಧ ರೀತಿಯ ಸಂಭಾವನೆ / ಭತ್ಯೆಗಳ ಪರಿಷ್ಕರಣೆ ಕುರಿತು. |
| **ತೀರ್ಮಾನ** | ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲ್ಪಡುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ನೀಡುತ್ತಿರುವ ವಿವಿಧ ರೀತಿಯ ಸಂಭಾವನೆ / ಭತ್ಯೆಗಳ ಪರಿಷ್ಕರಣೆಯ ಸಂಬಂಧ ಒಂದು ಸಮಿತಿಯನ್ನು ರಚಿಸಲು ಅದರ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/1.11** | 2018–19ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ವಿದೇಶಿ ಅಧ್ಯಾಪಕರು/ ಸಂಶೋಧಕರು/ ಪರಿಣಿತರನ್ನು ಆಹ್ವಾನಿಸಿ ವಿದ್ಯಾರ್ಥಿಗಳಿಗೆ ಬೋಧನೆ ಮಾಡಲು 2018–19ನೇ ಸಾಲಿನ ಆಯವ್ಯಯದಲ್ಲಿ ಶೀರ್ಷಿಕೆ 301ರಲ್ಲಿ ರೂ.1.00 ಕೋಟಿ ರೂಪಾಯಿಗಳನ್ನು ಅನುದಾನ ರೂಪದಲ್ಲಿ ಮೀಸಲಿರಿಸಿರುವ ಬಗ್ಗೆ. |
| **ತೀರ್ಮಾನ** | 2018–19ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ವಿದೇಶಿ ಅಧ್ಯಾಪಕರು/ಸಂಶೋಧಕರು/ಪರಿಣಿತರನ್ನು ಆಹ್ವಾನಿಸಿ ವಿದ್ಯಾರ್ಥಿಗಳಿಗೆ ಬೋಧನೆ ಮಾಡಲು ಹಾಗೂ ಈ ಸಂಬಂಧ ರಚಿಸಲಾಗಿದ್ದ ಸಮಿತಿಯ ಶಿಫಾರಸ್ಸಿನಂತೆ 2018–19ನೇ ಸಾಲಿನ ಆಯವ್ಯಯದ ಶೀರ್ಷಿಕೆ 301ರಲ್ಲಿ ಮೀಸಲಿರಿಸಿರುವ ರೂ. 1.00 ಕೋಟಿ ರೂಪಾಯಿಗಳ ಅನುದಾನದಿಂದ ಭರಿಸಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| 2019/1.12 | ವಿಶ್ವವಿದ್ಯಾನಿಲಯದ ಆರು ವಿವಿಧ ಹಳೆಯ ವಾಹನಗಳ ಬಹಿರಂಗ ಹರಾಜು ವಿಲೇವಾರಿ ಮಾಡಿದ ಕ್ರಮದ ಬಗ್ಗೆ ಸ್ಥಿರೀಕರಣಕ್ಕಾಗಿ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಆರು ವಿವಿಧ ಹಳೆಯ ವಾಹನಗಳ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2019/1.13 | University of Mysore and Dr. B.R.AMBEDKAR UNIVERSITY OF SOCIAL SCIENCES (BRAUSS), Dr. Ambedkar Nagar (MHOW) ಇವುಗಳ ನಡುವೆ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ. |
| ತೀರ್ಮಾನ | University of Mysore and Dr. B.R.AMBEDKAR UNIVERSITY OF SOCIAL SCIENCES (BRAUSS), Dr. Ambedkar Nagar (MHOW) ಇವುಗಳ ನಡುವ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳುವ ಸಂಬಂಧ ಕಾನೂನು ಸಲಹೆಗಾರರ ಅಭಿಪ್ರಾಯದನ್ವಯ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು. |
| 2019/1.14 | ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು Specialized Program ಗಳನ್ನು ನಡೆಸುತ್ತಿರುವ Cavilier Animation and Technlogies Pvt. Ltd., ಸಂಸ್ಥೆಯ ವಿಳಾಸವನ್ನು ಬದಲಾವಣೆ ಮಾಡಿರುವ ಬಗ್ಗೆ ಅನುಸಮರ್ಥನೆ ಕೋರಿ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು Specialized Programಗಳನ್ನು ನಡೆಸುತ್ತಿರುವ Cavilier Animation and Technlogies Pvt. Ltd., ಸಂಸ್ಥೆಯವರು ನಂ. 56-04, 2nd & 3rd Floor, D.R.Bendre Layout, Gubbi Cross, Opp.Decathlon Sports Store, Kothanur P.O, Bengaluru ಇಲ್ಲಿಗೆ ವಿಳಾಸ ಬದಲಾವಣೆಗೆ ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2019/1.15 | Information and Communication Division (ICD) ಗೆ ಪ್ರೊ. ಸುರೇಶ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಅವರನ್ನು ಸಿಸ್ಟಂ ಕೋಆರ್ಡಿನೇಟರ್ ಆಗಿ ನೇಮಕ ಮಾಡಿರುವ ಬಗ್ಗೆ – ಅನುಸಮರ್ಥನೆಗೆ. |
| ತೀರ್ಮಾನ | ಈ ಹಿಂದೆ ಸಿಸ್ಟಂ ಕೋ–ಆರ್ಡಿನೇಟ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ಜಿ.ಹೇಮಂತಕುಮಾರ್ ಅವರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಅಧಿಕಾರವಹಿಸಿಕೊಂಡಿರುವುದರಿಂದ Information and Communication Division (ICD)ಗೆ ಪ್ರೊ. ಸುರೇಶ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಅವರನ್ನು ಸಿಸ್ಟಂ ಕೋ–ಆರ್ಡಿನೇಟರ್ ಆಗಿ ನೇಮಕ ಮಾಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2019/1.16 | ಆನ್‌ಲೈನ್ ಪ್ರೋಗ್ರಾಮ್ಸ್‌ನ ಸಲುವಾಗಿ ಯು.ಜಿ.ಸಿ.ಗೆ ಅರ್ಜಿ ಸಲ್ಲಿಸುವುದರ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯವು ಆನ್‌ಲೈನ್ ಮುಖೇನ ವಿವಿಧ ಕೋರ್ಸುಗಳನ್ನು ಪ್ರಾರಂಭಿಸುವ ಸಲುವಾಗಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ(ಯು.ಜಿ.ಸಿ.) ಅನುಮತಿಗಾಗಿ ಅರ್ಜಿ ಸಲ್ಲಿಸಲು ಸಿಂಡಿಕೇಟ್ ಅನುಮೋದಿಸಿತು. |
| 2019/1.17 | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳು. |
| ತೀರ್ಮಾನ | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| 2019/1.18 | Memorandum of Understanding (MOU) between the University of Mysore (India) and Tallinn University of Technology (Estonia). |
| ತೀರ್ಮಾನ | Memorandum of Understanding (MOU) between the University of Mysore (India) and Tallinn University of Technology (Estonia) ಅವರೊಡನೆ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2019/1.19 | ಪ್ರೊ. ಬಿ.ಪಿ. ಮಹೇಶ್‌ಚಂದ್ರ ಗುರುರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ |
| ತೀರ್ಮಾನ | M.A in Mass Communication and Journalism ಸ್ನಾತಕೋತ್ತರ ಪದವಿಯಲ್ಲಿ Development Communication ವಿಷಯದಲ್ಲಿ ಅತಿಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾಗುವ ವಿದ್ಯಾರ್ಥಿಗೆ ದಾನಿಗಳು ನಿಬಂಧನೆಯಲ್ಲಿ ಸೂಚಿಸಿರುವಂತೆ ಪ್ರೊ. ಬಿ.ಪಿ. ಮಹೇಶ್‌ಚಂದ್ರ ಗುರುರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| 2019/1.20 | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಕಂಪ್ಯೂಟರ್, ವೀಡಿಯೋ ಸರ್ವಲೆನ್ಸ್ ಸಿಸ್ಟಂ, ಪ್ರಿಂಟರ್ಸ್,ಪ್ರೊಜೆಕ್ಟರ್, ಇಂಟರ್‌ನೆಟ್ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಕಂಪ್ಯೂಟರ್, ವೀಡಿಯೋ ಸರ್ವಲೆನ್ಸ್ ಸಿಸ್ಟಂ, ಪ್ರಿಂಟರ್ಸ್, ಪ್ರೊಜೆಕ್ಟರ್, ಇಂಟರ್‌ನೆಟ್ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸುವ ಸಂಬಂಧ ನಿಯಮಾನುಸಾರ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರಖರೀದಿಸಿ ಅಳವಡಿಸಲು ಹಾಗೂ ಇದರ ವೆಚ್ಚವನ್ನು I.I.D.F. ಶೀರ್ಷಿಕೆಯಿಂದ ಭರಿಸಲು ಸಿಂಡಿಕೇಟ್ ಅನುಮೋದಿಸಿತು. |
| 2019/1.21 | ಕುಕ್ಕರಹಳ್ಳಿ ಕೆರೆಯ ಮೀನು ಪಾಶುವಾರು ಗುತ್ತಿಗೆಯನ್ನು ಮುಂದುವರೆಸುವ ಬಗ್ಗೆ. |
| | ದಿನಾಂಕ 03–08–2017ರ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ವಿಶ್ವವಿದ್ಯಾನಿಲಯವು ದಿನಾಂಕ 15–09–2017ರಂದು ಮಹಾಮಂಡಳಿಗೆ ಪತ್ರ ಬರೆದು ಮೂರನೇ ವರ್ಷದ ಅಂದರೆ ದಿನಾಂಕ 01–07–2016ರಿಂದ 30–06–2017ರ ವರೆಗಿನ ಲೈಸೆನ್ಸ್ ಶುಲ್ಕ ರೂ. 6,67,013/–ನ್ನು ಮಾಡಲಾಗುವುದಿಲ್ಲವೆಂದು ತಿಳಿಸಿರುವುದನ್ನು ಮರುಗುತ್ತಿಗೆ ನೀಡಿರುವ ಬಗ್ಗೆ ಮಹಾಮಂಡಳಿಗೆ ಕಾರಣ ಕೇಳುವ ನೋಟಿಸನ್ನು ಜಾರಿಗೊಳಿಸಿರುವುದನ್ನು ಮತ್ತು ದಿನಾಂಕ 3–3–2018ರಂದು ಮೀನು ಪಾಶುವಾರು ಗುತ್ತಿಗೆಯನ್ನು ಸಿಂಡಿಕೇಟ್ ಅನೂರ್ಜಿತಗೊಳಿಸಿರುವುದನ್ನು ಈಗಿನ ಸಿಂಡಿಕೇಟ್ ಗಮನಿಸಿತು.<br><br>ಈ ಕುರಿತು ಮಹಾಮಂಡಳಿ ಸಾಕಷ್ಟು ಪತ್ರ ವ್ಯವಹಾರ ನಡೆಸಿರುವುದನ್ನು ದಿನಾಂಕ 05–12–2018ರಂದು ನಡೆದ ಸಿಂಡಿಕೇಟ್ ಸಭೆಯು ಗಮನಿಸಿ, ತೆಗೆದುಕೊಂಡ ನಿರ್ಣಯದಂತೆ ದಿನಾಂಕ 19–12–2018ರಂದು ಮಹಾಮಂಡಳಿಗೆ ನೋಟಿಸನ್ನು ಜಾರಿಮಾಡಲಾಗಿದ್ದು, ಅದಕ್ಕೆ ಮಹಾಮಂಡಳಿ ದಿನಾಂಕ 26–12–2018ರಂದು (ದಿನಾಂಕ : 21–02–2014 ರ ಕರ್ನಾಟಕ ಸರ್ಕಾರದ ಆದೇಶವನ್ನು ಲಗತ್ತಿಸಿ) ನೀಡಿದ ಸಮಜಾಯಿಷಿಯಲ್ಲಿ ಗುತ್ತಿಗೆ ಕರಾರಿನ ಉಲ್ಲಂಘನೆಯಾಗಿದ್ದರೂ ಕೆರೆ ಗುತ್ತಿಗೆಯನ್ನು ರದ್ದುಪಡಿಸಿರುವುದು ಕಾನೂನಿಗೆ ವಿರುದ್ಧವಾಗಿರುತ್ತದೆ ಹಾಗೂ ಒಟ್ಟು 14 ತಿಂಗಳ ಗುತ್ತಿಗೆ ಆದೇಶ ಮುಂದುವರೆಸದೇ ಇದ್ದುದರಿಂದ 2015–16ನೇ ಸಾಲಿನಲ್ಲಿ ಬಿತ್ತನೆ ಮಾಡಿ ಬೆಳೆದಿದ್ದ ಮೀನುಗಳನ್ನು ಹಿಡಿದುಕೊಳ್ಳಲು ಅವಕಾಶವನ್ನೇ ನೀಡಿರುವುದಿಲ್ಲ. ಅಲ್ಲದೇ ದಿನಾಂಕ 01–08–2018 |

| | |
|---|---|
| | ರಂದು ಮಹಾಮಂಡಳಿ ಸದಸ್ಯ ಸಂಘವು ಕುಕ್ಕರಹಳ್ಳಿ ಕೆರೆಯಲ್ಲಿ ಕದ್ದು ಮೀನು ಹಿಡಿಯುತ್ತಿದ್ದವರನ್ನು ಹಿಡಿದು ಸದರಿ ಕಾರ್ಯಕ್ಕೆ ಸಹಕಾರ ನೀಡುತ್ತಿದ್ದ ವಿಶ್ವವಿದ್ಯಾನಿಲಯದ ಸಿಬ್ಬಂದಿಗಳು ಕಾರಣರಾಗಿರುವುದನ್ನು ದಾಖಲೆ ಸಮೇತ ತಮ್ಮ ಕಛೇರಿಗೆ ದೂರು ಸಲ್ಲಿಸಿರುವುದನ್ನು ಹಾಗೂ ಕುಕ್ಕರಹಳ್ಳಿ ಕೆರೆಗೆ ಬಂಡವಾಳ ಹೂಡಿ ಅಭಿವೃದ್ಧಿಪಡಿಸುತ್ತಿರುವ ಮಹಾಮಂಡಳಿ ಸದಸ್ಯ ಸಂಘವು 14 ತಿಂಗಳ ನಷ್ಟವನ್ನು ಭರಿಸಿಕೊಡಬೇಕೆಂದು ನ್ಯಾಯಾಲಯದ ಮೊರೆ ಹೋಗುವುದಾಗಿ ನೋಟೀಸ್ ನೀಡಿರುತ್ತಾರೆಂದು ತಿಳಿಸಿರುವುದನ್ನು ಸಿಂಡಿಕೇಟ್ ಗಮನಿಸಿತು. |
| ತೀರ್ಮಾನ | ದಿನಾಂಕ 19-12-2018 ರ ನೋಟೀಸ್‌ನಲ್ಲಿ ನಾಲ್ಕನೆಯ ವರ್ಷದ ಅಂದರೆ ದಿನಾಂಕ 01-07-2017ರಿಂದ 30-06-2018 ರ ಅವಧಿಯ ಲೈಸೆನ್ಸ್ ಶುಲ್ಕ ರೂ.7,00,364/- ಅನ್ನು ಅವಧಿ ಮುಗಿದ ನಂತರ ಅಂದರೆ ದಿನಾಂಕ 18-07-2018 ರಂದು ಜಮಾ ಮಾಡಿರುವುದನ್ನು ಗಮನಿಸಿದ ಸಿಂಡಿಕೇಟ್ ಸಭೆಯು ಅವರ ಆಕ್ಷೇಪಣೆಗಳನ್ನು ಮತ್ತು ಕೋರಿಕೆಯನ್ನು ಗಮನಿಸಿ, ಅವರಿಗೆ [illegible]ದ ಅನೂರ್ಜಿತಗೊಳಿಸಿದ ಆದೇಶವನ್ನು ಪಡೆದು ಅವರು ದಿನಾಂಕ 18-07-2018 ರಂದು ಪಾವತಿಸಿರುವ ಗುತ್ತಿಗೆ ಶುಲ್ಕವನ್ನು ದಿನಾಂಕ 01-07-2018 ರಿಂದ 30-06-2019ರ ಅವಧಿಯೆಂದು ಪರಿಗಣಿಸಿತು ಹಾಗೂ ಐದನೇ ವರ್ಷದ ಗುತ್ತಿಗೆ ಹಣ ರೂ.7,35,382/-ಗಳನ್ನು ನಿಯಮಾನುಸಾರ ಪಾವತಿಸಬೇಕೆಂಬ ಷರತ್ತಿಗೊಳಪಟ್ಟು ಮತ್ತು ಈ ಅವಧಿಯು ದಿನಾಂಕ 01-07-2019 ರಿಂದ 30-06-2020ರದೆಂದು ಪರಿಗಣಿಸಿ ಮೀನುಪಾಶುವಾರು ನಡೆಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **2019/1.22** | ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ನಿರ್ದೇಶಕ ಹುದ್ದೆಗೆ ಪ್ರೊ. ಚಿದಂಬರಸ್ವಾಮಿ, ಪ್ರಾಧ್ಯಾಪಕರು, ಇವರನ್ನು ನೇಮಕ ಮಾಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | ಕೌನ್ಸಿಲ್ ಆಫ್ ಆರ್ಕಿಟೆಕ್ಚರ್ ಮಾರ್ಗಸೂಚಿಯನ್ವಯ ಅವಶ್ಯವಿರುವ ವಿದ್ಯಾರ್ಹತೆ ಹಾಗೂ ಜೇಷ್ಠತೆಗೆ ಅನುಗುಣವಾಗಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೊ. ಚಿದಂಬರಸ್ವಾಮಿ, ಪ್ರಾಧ್ಯಾಪಕರು, ಇವರನ್ನು ಸದರಿ ವಿಭಾಗಕ್ಕೆ ನಿರ್ದೇಶಕರನ್ನಾಗಿ ನೇಮಕ ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **2019/1.23** | ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸುವ ಸಂಬಂಧ ಸಿಂಡಿಕೇಟಿನ ಅನುಮೋದನೆಗಾಗಿ ಕರಡು ವಿಷಯವನ್ನು ಮಂಡಿಸಿರುವ ಬಗ್ಗೆ. |
| ತೀರ್ಮಾನ | ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸುವ ಸಂಬಂಧ ಸಿಂಡಿಕೇಟ್ ಸಭೆಯು ನಿಯಮಾನುಸಾರ ಅಧ್ಯಕ್ಷರನ್ನು ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ತೀರ್ಮಾನಿಸಿತು. |
| **2019/1.24** | 2018-2019ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಮರುಹೊಂದಾಣಿಕೆ (Re-appropriation) ಬಗ್ಗೆ. |
| ತೀರ್ಮಾನ | ಪ್ರಸ್ತಾವನೆಯಲ್ಲಿ ಮಂಡಿಸಿರುವಂತೆ 2018-2019ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಮರುಹೊಂದಾಣಿಕೆ (Re-appropriation) ಮಾಡಿಕೊಳ್ಳಲು ಹಣಕಾಸು ಸಮಿತಿಯು ಅನುಮೋದಿಸಿರುವುದನ್ನು ಸಿಂಡಿಕೇಟ್ ಸಹ ಅನುಮೋದಿಸಿತು. |

| | |
|---|---|
| 2019/1.25 | ಮೈಸೂರು ವಿಶ್ವವಿದ್ಯಾನಿಲಯದ 1995–98ರಿಂದ 2013–15ರವರೆಗಿನ ಮಹಾಲೇಖಪಾಲರ ಲೆಕ್ಕಪತ್ರಗಳ ವರದಿಗೆ ಅನುಪಾಲನಾ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ 1995–98 ರಿಂದ 2013–15ರ ಸಾಲಿನವರೆಗಿನ ಮಹಾಲೇಖಪಾಲರ ಲೆಕ್ಕಪತ್ರಗಳ ವರದಿಗೆ ಅನುಪಾಲನಾ ವರದಿಯನ್ನು ಮಹಾಲೇಖಪಾಲರು / ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಲು ಸಿಂಡಿಕೇಟ್ ಅನುಮೋದಿಸಿತು. |
| 2019/1.26 | ಮೈಸೂರು ವಿಶ್ವವಿದ್ಯಾನಿಲಯದ 2019–20ನೇ ಸಾಲಿಗೆ ಯೋಜನೇತರ ಆಯವ್ಯಯ ಅಂದಾಜಿನ ವಿವರಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಬ್ಲಾಕ್ ಅನುದಾನದ ಬಿಡುಗಡೆ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ 2019–20ನೇ ಸಾಲಿಗೆ ಯೋಜನೇತರ ಆಯವ್ಯಯ ಅಂದಾಜಿನ ವಿವರಗಳನ್ನು ಪರಿಶೀಲಿಸಿದ ಸಿಂಡಿಕೇಟ್ ರೂ. 183,91,800 ರೂ.ಗಳ ಬ್ಲಾಕ್ ಅನುದಾನದ ಬಿಡುಗಡೆಗೆ ಹಣಕಾಸು ಸಮಿತಿಯ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2019/1.27 | ಶ್ರೀ ಜಗದೀಶ್ ಕೆ.ಎಸ್., ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ |
| ತೀರ್ಮಾನ | ಡಾ. ಪಿ.ಶರಣಪ್ಪ, ಸಹ ಪ್ರಾಧ್ಯಾಪಕರು ಇವರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಜಗದೀಶ್ ಕೆ.ಎಸ್., ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿಯಾಗಿ ಆರು ತಿಂಗಳುಗಳ ಕಾಲಾವಕಾಶ ಕೋರಿರುವ ಸಕಾರಣ ಮನವಿಯನ್ನು ಪುರಸ್ಕರಿಸಿದ ಸಿಂಡಿಕೇಟ್ ಸದರಿಯವರಿಗೆ ರೂ.25,000/–ಗಳ ದಂಡಶುಲ್ಕದೊಂದಿಗೆ ಸಂಶೋಧನೆಯನ್ನು ಅಂತಿಮಗೊಳಿಸಿ ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕೆಂಬ ಷರತ್ತಿನೊಂದಿಗೆ ಆರು ತಿಂಗಳ ಕಾಲಾವಕಾಶವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/1.28 | 2018–19ನೇ ಸಾಲಿಗೆ ರೂ.10,63,01,652/–ಗಳನ್ನು ಪೂರಕ ಅನುದಾನವಾಗಿ ಬಿಡುಗಡೆಗೊಳಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ |
| ತೀರ್ಮಾನ | ಸರ್ಕಾರದ ಆದೇಶಗಳನ್ವಯ 2018–19ನೇ ಸಾಲಿಗೆ ಏಪ್ರಿಲ್ 2019ರಿಂದ ಜಾರಿಗೊಳಿಸಿದ 6ನೇ ವೇತನ ಶ್ರೇಣಿಯಿಂದ ಉಂಟಾದ ವೇತನ ವ್ಯತ್ಯಾಸ ಹಾಗೂ ಪಿಂಚಣಿ ವ್ಯತ್ಯಾಸದ ಬಾಬ್ತು ಒಟ್ಟಾರೆ ರೂ. 10,63,01,652/–ಗಳನ್ನು ಪೂರಕ ಅನುದಾನವಾಗಿ ಬಿಡುಗಡೆಗೊಳಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2019/1.29 | ಶ್ರೀ ಅಂಬೇಡ್ಕರ್. ಎನ್.ಎಸ್., ಸಂಶೋಧನಾ ಅಭ್ಯರ್ಥಿ ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| ತೀರ್ಮಾನ | ಶ್ರೀ ಅಂಬೇಡ್ಕರ್ ಎನ್.ಎಸ್., ಸಂಶೋಧನಾ ಅಭ್ಯರ್ಥಿ ಇವರು ಹೆಚ್ಚುವರಿಯಾಗಿ ಒಂದು ತಿಂಗಳ ಕಾಲಾವಕಾಶ ಕೋರಿರುವ ಸಂಬಂಧ, ಮಾರ್ಗದರ್ಶಕರ ಶಿಫಾರಸ್ಸಿನ ಮೇರೆಗೆ ಸದರಿಯವರಿಗೆ ರೂ.25,000/–ಗಳ ಶುಲ್ಕವನ್ನು ದಂಡದ ರೂಪದಲ್ಲಿ ವಿಧಿಸಿ ಒಂದು ತಿಂಗಳ ಕಾಲ ಸಂಶೋಧನಾ ಅವಧಿಯನ್ನು ವಿಸ್ತರಿಸಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2019/1.30** | ಪಿಹೆಚ್.ಡಿ., ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ನೋಂದಣಿ ಪಡೆಯಲು ಇರುವ ಕಾಲ ಮಿತಿಯನ್ನು ವಿಸ್ತರಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ 14–01–2019ರಂದು ಜರುಗಿದ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಪಿಹೆಚ್.ಡಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ನೋಂದಣಿ ಪಡೆಯಲು ಇರುವ ಕಾಲ ಮಿತಿಯನ್ನು 02 ವರ್ಷಗಳಿಗೆ ವಿಸ್ತರಿಸಲು ನಿರ್ಧರಿಸಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |
| **2019/1.31** | **Promotion to University Teachers – Under UGC-CAS.** |
| | The Syndicate deliberated at length the UGC Guidelines and the approved Statutes of the University in respect of promotions to University Teachers under UGC-CAS and examined thoroughly the following points:<br><br>Dr. J. Rajesh, and others (Dr. Ramu, Dr. M.R. Puttaswamy, Dr. K. Anand, Dr. P. Rashmi, Mr. Gavin Judo Wilson, Dr. C.E. Lokesha, Dr. Rohith L. Shankar, Dr. G. Sreenivasa, Dr. M.R. Janardana, Dr. T.S. Jagadeesh Kumar, Dr. S.S. Malini, Dr. Sampath Kumar and Dr. Krishna Hombal) approached Hon'ble High Court of Karnataka, Bengaluru to consider their promotion under Career Advancement Scheme without insisting the requirement of API based PBAS system (Writ Petition Nos. 40333-346/2017 [S-TR]).<br><br>Hon'ble High Court of Karnataka in its order dated 09.04.2018 and the Principal Secretary, Department of Higher Education, Government of Karnataka in their letter No. ED 42 UMV 2018 dated 18.05.2018 instructed the University of Mysore to expedite the promotions of Dr. J. Rajesh and others under Career Advancement Scheme as per the UGC regulations and the approved Statutes of University of Mysore regulating the promotions under Career Advancement Scheme.<br><br>The Syndicate also observed carefully the following letters of UGC, New Delhi and Department of Higher Education, Government of Karnataka. These letters are enclosed as supporting documents in the writ petition filed by Dr. J. Rajesh others.<br><br>**1. UGC letter D.O.F.No. 3-2/2009(PS) dated 4th August, 2015.**<br><br>*"Incumbent Readers and Lecturers (Selection Grade) who had not completed three years in the pay scale of Rs. 12000-Rs.18300 on or after* ***<u>1st January, 2006</u>*** *shall be placed at the appropriate stage in the Pay Band of Rs. 15600-Rs. 39100 with AGP of Rs. 8000 till they complete three years of service in the grade of Lecturer (Selection Grade)/Reader and thereafter, shall be placed in the higher pay Band IV* |

| | |
|---|---|
| | *of Rs. 37000-Rs. 67000 and accordingly re-designate as Associate Professor."*<br><br>In this connection, it is clarified that the Readers appointed on or after 01.01.2006 till the issue of aforementioned UGC Regulations, 2010 i.e. 30.06.2010, shall move to pay Band – 4 with Academic Grade Pay of Rs. 9000 after completing three years of service without insisting the requirement of API based PBAS system. **This shall also apply to the Lecturers (Selection Grade) promoted during the above period.**<br><br>**2. UGC letter No. F.3-15/2009(PS) dated 19th July, 2010.**<br><br>Any candidate after becoming eligible for promotion under Career Advancement Scheme in terms of these regulations **(UGC Regulations, 2010 i.e. 30.06.2010) on or after 31.12.2008,** the promotion of such candidate shall be governed by the provision of the new Regulations. Furthermore in the event of any candidate having become eligible for promotion under Career Advancement Scheme prior to 31.12.2008, the promotion of such a candidate under CAS shall be governed by the old UGC regulations, 2000 notified vide Notification No. F.3-1/2000(PS) dated 4th April 2000 as amended from time to time. (Clarified regarding the nomination of UGC observer).<br><br>The above letter clarifies the provision made under section 1.3 of UGC Regulations, 2010 i.e. 30.06.2010.<br><br>**Guidelines for promotion without insisting API based PABS system:**<br><br>Based on the above UGC letters and UGC Regulations, 2010 i.e. 30.06.2010, eligible candidates comes under the following timeline shall be promoted / re-designate without insisting on API based PABS system for their Career Advancement Scheme<br><br>**1.** Incumbent Readers and Lectures (Selection Grade) *who had not completed three years in the pay scale of Rs. 12000-Rs.18300 on or after* ***1st January, 2006.***<br>2. Readers appointed **on or after 01.01.2006** till the issue of aforementioned UGC Regulations, 2010 i.e. 30.06.2010, shall move to pay Band – 4 with Academic Grade Pay of Rs. 9000.<br>3. Readers and Lectures (Selection Grade) who are eligible **prior to 31.12.2008,** the promotion of such a candidate under CAS shall be governed by the old UGC regulations, 2000. |

| | |
|---|---|
| | **<u>Guidelines for promotion with API based PABS system:</u>**<br><br>Based on the above UGC letters and UGC Regulations, 2010 i.e. 30.06.2010, following candidates required API based PBAS system.<br><br>1. Any candidate after becoming eligible for promotion under Career Advancement Scheme in terms of these regulations **(UGC Regulations, 2010 i.e. 30.06.2010) on or after 31.12.2008,** the promotion of such candidate shall be governed by the provision of the new Regulations.<br>2. As per the clarification issued by UGC the Career Advancement Scheme Regulations and its subsequent amendments will applied for the promotion to teachers considering their eligibility date for promotion (UGC letter F.No.1-1/2012(PS)dated November 2014)<br><br>**3. Government of Karnataka, Higher Education Council issued a letter dated 17.03.2016.**<br><br>• Government of Karnataka Extended Career Advancement Scheme cut off date stipulated in UGC letter (No. F.3-15/2009(PS) dated 19th July, 2016) from 31.12.2008 to 30.08.2010 to consider their application in old scheme. This letter was issued to the Commissioner of Collegiate Education Department which is applicable to Government First Grade College and not for University constituent colleges.<br>• Since the date of letter issued was 17.03.2016, most of the faculties was promoted with 2010 regulations and is being placed with AGP 8000 scale. Hence, implementation of this Government letter is irrelevant.<br><br>The Syndicate noted the constitution of the Selection Committee by the University as per the Hon'ble High Court Order and letter issued by the Principal Secretary, Department of Higher Education, Government of Karnataka, and meetings convened to evaluate the candidates for API based PABS system as per UGC Regulations, 2010 i.e. 30.06.2010 and as per Statutes of University of Mysore for promotion under Career Advanced Scheme. Accordingly all the 14 members who approached the Honourable High Court were intimated to attend the Selection Committee.<br><br>Except Dr. Malini, Dr. Sampath Kumar and Dr. Krisha Hombal all others |

| | |
|---|---|
| | informed the University in writing that they are not attending the Selection Committee since their promotion should be considered without API based PBAS system (among the petitioners one of the teacher. Dr. M.R. Janardhan was unable to attend the Selection Committee of Earth Science since he was officially permitted to attend a Workshop at University of Kerala).<br><br>The Syndicate gone through the endorsement issued by the University vide letter No. ET3/12/635/2011-12 dated 28.01.2019 that their promotion under Career Advancement Scheme comes under UGC Regulations, 2010 i.e. 30.06.2010 and evaluation of their API based PBAS system in front of the Selection Committee is mandatory, (in response to the representation of the eleven teachers)<br><br>The Syndicate had also gone through the Judgement of the Hon'ble High Court of Karnataka that their promotion should be considered as per the UGC regulations and the Statutes of University of Mysore. The Honourable High Court is yet here the prayer of Dr. J. Rajesh and others for their promotion without insisting API based PABS system of UGC Regulations, 2010 i.e. 30.06.2010.<br><br>*Under the* circumstances explained in detail with regard to the promotions to University teachers under UGC-CAS, the Syndicate took the following decision. |
| **Decision:** | 1. The recommendations of the Selection Committee and Screening-cum Evaluation Committee of various subjects for promotion of teachers in respective subjects to the higher AGP furnished at Appendix – A are approved.<br>Further, the Syndicate has also decided<br>• that the monetary benefits to the teachers, who have applied/submitted their application in prescribed form and are eligible on or before 31-12-2018, shall be applicable from the date of 1st February 2019.<br>• To apply /extend its decision dated 16-11-2018 to all the cases where the Assistant Professors already promoted from AGP Rs. 6000 to Rs. 7000 as per Syndicate decision dated 21-06-2018.<br><br>2. Further, the Syndicate after carefully gone through the facts of the cases gone through and *observing* the facts in Appendix-B, the *Syndicate approved*<br>• *the recommendations of the Selection Committee to promote Dr. Malini, Dr. Sampath Kumar and Dr. Krisha Hombal to the next AGP of Rs. 9000.* |

| | |
|---|---|
| | • *The Syndicate approved the recommendations of the Selection Committee to defer the interview process of Dr. M.R.Janardana since he was officially given permission to attend a conference in Kerala. However, Syndicate also noted the letter given by Dr. M.R.Janardana stating that his promotion shall be without insisting on API Score.*<br>• *The Syndicate also approved ~~the~~ the Selection Committee in respect of Dr. M.R.Puttaswamy that his application is ineligible for promotion to next AGP since his API score was below the prescribed API score as per the UGC regulations.*<br>• *The University Syndicate also approved the recommendations of Selection Committee in respect of Dr. J. Rajesh and others, not to consider their candidature for promotion to the next AGP, since they failed to appear before the Selection Committee for evaluation of their API based PBAS system as per UGC Regulations, 2010 i.e. 30.06.2010.*<br>• *The Syndicate noted all the recommendations of the Selection Committee and approved the same. Further, the Syndicate decided to issue an endorsement to the candidates that their CAS promotion was not considered, since they failed to appear before the Selection Committee.*<br>*The syndicate directed the authorities of the University* to place all the details of the meeting of the Syndicate, the decision and action taken by the University before the Hon'ble High Court of Karnataka and also to the Government of Karnataka. |
| **2019/1.32** | ಕುವೆಂಪು ಕಾವ್ಯಾಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಕುವೆಂಪು ಕಾವ್ಯಾಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಅಧಿನಿಯಮಾನುಸಾರ ಸೂಕ್ತ ಶಿಕ್ಷಣತಜ್ಞರೊಬ್ಬರನ್ನು ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/1.33** | ಮೈಸೂರು ವಿಶ್ವವಿದ್ಯಾನಿಲಯದಲ್ಲಿನ Online Programmeನ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರಗಳನ್ನು ನೀಡುವುದರ ಬಗೆಗೆ. |
| ತೀರ್ಮಾನ | 2014–15ನೇ ಸಾಲಿನಿಂದ 2017ನೇ ಸಾಲಿನಿಂದ 2017–18ನೇ ಸಾಲಿನವರೆಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ನಿಯಮದಂತೆ ಪರೀಕ್ಷಾ ಪ್ರಕ್ರಿಯೆಯನ್ನು ನಿರ್ವಹಿಸಿ ರೆಗ್ಯೂಲರ್ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರಗಳನ್ನು ನೀಡುವ ರೀತಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ Online Programmeನ ಅಡಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೂ ಪದವಿ ಪ್ರಮಾಣಪತ್ರಗಳನ್ನು ನೀಡಲು ಸಿಂಡಿಕೇಟ್ ಅನುಮೋದಿಸಿತು. |
| **2019/1.34** | ಓ.ಎಂ.ಆರ್. ಬಾರ್ ಕೋಡೆಡ್ ಉತ್ತರ ಪತ್ರಿಕೆಗಳನ್ನು ಮುದ್ರಿಸಲು ಇ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವದಿ ಟೆಂಡರ್ ಕರೆಯುವ ಬಗ್ಗೆ. |
| ತೀರ್ಮಾನ | ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಿ ಓ.ಎಂ.ಆರ್. ಬಾರ್ ಕೋಡೆಡ್ ಉತ್ತರ ಪತ್ರಿಕೆಗಳನ್ನು ಮುದ್ರಿಸಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2019/1.35** | ಮೈಸೂರು ವಿಶ್ವವಿದ್ಯಾನಿಲಯದ ಇಂಟರ್‌ನೆಟ್ ವ್ಯವಸ್ಥೆಯನ್ನು ಉನ್ನತೀಕರಿಸುವ ದೃಷ್ಟಿಯಿಂದ Net Working Operation Centre (N.O.C) Upgradation ಗಾಗಿ ಮಂಜೂರಾತಿ ನೀಡುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಇಂಟರ್‌ನೆಟ್ ವ್ಯವಸ್ಥೆಯನ್ನು ಉನ್ನತೀಕರಿಸುವ ದೃಷ್ಟಿಯಿಂದ Net Working Operation Centre (N.O.C) Upgradation ಗಾಗಿ ಅವಶ್ಯಕ ವಸ್ತುಗಳಿಗೆ ವೆಚ್ಚವಾಗಬಹುದಾದ ರೂ. 39,10,117ಗಳ ಅಂದಾಜು ಮೊತ್ತವನ್ನು ನಿಯಮಾನುಸಾರ ಈ-ಪೋರ್ಟಲ್ ಮುಖೇನ ಕ್ರಮಕೈಗೊಂಡು ಇದರ ವೆಚ್ಚವನ್ನು 2017-18 & 2018-19ನೇ ಆರ್ಥಿಕ ಸಾಲಿನಲ್ಲಿ ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನದಿಂದ ಹಾಗೂ ಇನ್ನುಳಿದ ಮೊತ್ತವನ್ನು I.I.D.F ಶೀರ್ಷಿಕೆಯಿಂದ ಭರಿಸಲು ಸಿಂಡಿಕೇಟ್ ಅನುಮೋದಿಸಿತು. |

ಅಂತಿಮವಾಗಿ, ತಮ್ಮ ಅಮೂಲ್ಯ ಸಮಯದೊಂದಿಗೆ ಇಂದಿನ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಲಹೆ ಸಹಕಾರಗಳನ್ನು ನೀಡಿ ಮಂಡಿಸಿದ್ದ ವಿಷಯಗಳ ಬಗ್ಗೆ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಪತಿಗಳು ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ** **ಕುಲಪತಿ ಮತ್ತು ಅಧ್ಯಕ್ಷರು**